ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ದೆಹಲಿ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ ದಿನಾಂಕ : DATE : 17/2/20

# ಮೋದಿಜೀ, ನನ್ನನ್ನು ಹರಸಿ

ವಿ.ವಾ 17/2/20

## ಭಾಷಣದಲ್ಲಿ ಅಚ್ಚರಿ ಪ್ರಸ್ತಾಪ। 3ನೇ ಬಾರಿಗೆ ಸಿಎಂ ಆಗಿ ಕೇಜ್ರಿವಾಲ್ ಪ್ರಮಾಣ

ನವದೆಹಲಿ: ದೆಹಲಿಯಲ್ಲಿ ಆಮ್ ಆದ್ಮಿ ಪಾರ್ಟಿ 3.0 ಸರ್ಕಾರ ಶುರುವಾಗಿದೆ. ಭಾನುವಾರ ಐತಿಹಾಸಿಕ ರಾಮಲೀಲಾ ಮೈದಾನದಲ್ಲಿ ಆಯೋಜಿಸಲಾಗಿದ್ದ ಅದ್ದೂರಿ ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮದಲ್ಲಿ ಲೆಫ್ಟಿನೆಂಟ್ ಗವರ್ನರ್ ಅನಿಲ್ ಬೈಜಲ್ ಅವರು ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್‌ಗೆ ಅಧಿಕಾರ ಮತ್ತು ಗೋಪ್ಯತೆಯ ಪ್ರಮಾಣ ವಚನ ಬೋಧಿಸಿದ್ದಾರೆ. ಅವರ ಜತೆಗೆ ಸಚಿವರಾದ ಮನೀಷ್ ಸಿಸೋಡಿಯಾ, ಸತ್ಯೇಂದ್ರ ಜೈನ್, ಕೈಲಾಷ್ ಗೆಹ್ಲೋಟ್, ಗೋಪಾಲ್ ರಾಯ್, ರಾಜೇಂದ್ರ ಪಾಲ್ ಗೌತಮ್, ಇಮ್ರಾನ್ ಹುಸೈನ್ ಅವರೂ ಪ್ರಮಾಣ ಸ್ವೀಕರಿಸಿದ್ದಾರೆ.

ಕಾರ್ಯಕ್ರಮದ ಬಳಿಕ ಮಾತನಾಡಿದ ಸಿಎಂ ಕೇಜ್ರಿವಾಲ್, ತಮ್ಮ ವಿರುದ್ಧ ವಾಗ್ದಾಳಿ ನಡೆಸಿದ ಎಲ್ಲರನ್ನೂ ಕ್ಷಮಿಸುವುದಾಗಿ ಹೇಳಿದ್ದಾರೆ. ಬಿಜೆಪಿ, ಕಾಂಗ್ರೆಸ್ ಅಭ್ಯರ್ಥಿಗಳಿಗೆ ಮತಹಾಕಿದವರಿಗೂ ಸೇರಿದಂತೆ ತಾವು ಸಮಗ್ರ ದೆಹಲಿಗೇ ಮುಖ್ಯಮಂತ್ರಿ. ಯಾವುದೇ ಪಕ್ಷ, ಜಾತಿ, ಧರ್ಮ ನನಗೆ ಮುಖ್ಯವಲ್ಲ. ದೆಹಲಿಯ ಎಲ್ಲ 2 ಕೋಟಿ ಮಂದಿಯೂ ನನ್ನ ಕುಟುಂಬ ಎಂದಿದ್ದಾರೆ.

- ಸಿಸೋಡಿಯಾ ಸೇರಿದಂತೆ 6 ಸಚಿವರ ಪ್ರಮಾಣ
- ದಿಲ್ಲಿಗರ ಸಿಎಂ ನಾನು; ದೆಹಲಿ ಸುಪುತ್ರನೆಂದು ಅರವಿಂದ ಹೇಳಿಕೆ

ದೆಹಲಿಯಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಜಾರಿಗೊಳಿಸಲು ಪ್ರಧಾನಿ ನರೇಂದ್ರ ಮೋದಿ ಅವರ ಆಶೀರ್ವಾದ ಬೇಕಾಗಿದೆ ಎಂದು ಕೇಜ್ರಿವಾಲ್ ಹೇಳಿರುವುದು ಗಮನಾರ್ಹ. 'ಪ್ರಧಾನಿ ನರೇಂದ್ರ ಮೋದಿಯವರಿಗೆ ಕಾರ್ಯಕ್ರಮಕ್ಕೆ ಆಹ್ವಾನ ನೀಡಿದ್ದೆ. ಅನಿವಾರ್ಯ ಕಾರಣಗಳಿಂದ ಅವರು ಆಗಮಿಸಿಲ್ಲ. ದೆಹಲಿಯಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿಗೆ ತರಲು ಈ ವೇದಿಕೆಯಿಂದ ಪ್ರಧಾನಿಯವರ ಮತ್ತು ಕೇಂದ್ರ ಸರ್ಕಾರದ ಆಶೀರ್ವಾದ ಬೇಡಿಕೊಳ್ಳುತ್ತಿದ್ದೇನೆ. ನಾವು ಕೇಂದ್ರ ಸರ್ಕಾರದ ಜತೆಗೂಡಿ ಕಾರ್ಯನಿರ್ವಹಿಸಲು ಸಿದ್ಧ' ಎಂದು ಹೇಳಿದ್ದಾರೆ. ತಮ್ಮನ್ನು ತಾವು 'ದೆಹಲಿಯ ಸುಪುತ್ರ' ಎಂದು ಘೋಷಿಸಿಕೊಂಡಿರುವ ಕೇಜ್ರಿವಾಲ್, ಚುನಾವಣೆಯಲ್ಲಿನ ಜಯ ತಮ್ಮದಲ್ಲ, ಅದೇನಿದ್ದರೂ, ದೆಹಲಿಯ ಪ್ರತಿಯೊಬ್ಬ ನಾಗರಿಕನದ್ದು ಎಂದಿದ್ದಾರೆ.

**ಬಿಜೆಪಿಗೆ ತಿರುಗೇಟು:** 'ಕೇಜ್ರಿವಾಲ್ ಎಲ್ಲವನ್ನೂ ಉಚಿತವಾಗಿ ನೀಡುತ್ತಿದ್ದಾರೆ ಎಂದು ಕೆಲವರು ದೂರುತ್ತಿದ್ದಾರೆ. ಜಗತ್ತಿನ ಎಲ್ಲ ಅಮೂಲ್ಯ ವಸ್ತುಗಳನ್ನು ನಿಸರ್ಗವೇ ಉಚಿತವಾಗಿ ನೀಡಿದೆ. ಅದು ತಾಯಿಯ ಪ್ರೀತಿಯಾಗಿರಲಿ, ತಂದೆಯ ವಾತ್ಸಲ್ಯವಾಗಿರಲಿ ಅಥವಾ ಶ್ರವಣ ಕುಮಾರನ ಆದರ್ಶವಾಗಿರಲಿ... ಅದೇ ರೀತಿ ಕೇಜ್ರಿವಾಲ್ ತನ್ನ ಜನರನ್ನು ಪ್ರೀತಿಸುತ್ತಾನೆ.

ಈ ಪ್ರೀತಿಯೂ ಉಚಿತ. ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವವರಿಗೆ ಅಥವಾ ಸರ್ಕಾರಿ ಶಾಲೆಗಳಲ್ಲಿ [illegible] ಅದೊಂದು ನಾಚಿಕೆಗೇಡಿನ ಸಂಗತಿಯಾಗುವುದಿಲ್ಲವೇ ಎಂದು ಪ್ರಶ್ನಿಸುವ ಮೂಲಕ ಅವರು, ಬಿಜೆಪಿಯ ಹೆಸರು ಪ್ರಸ್ತಾಪಿಸದೆ ತಿರುಗೇಟು ನೀಡಿದ್ದಾರೆ. ಕಾರ್ಯಕ್ರಮಕ್ಕೆ ದೆಹಲಿಯ ಎಲ್ಲಾ ಸರ್ಕಾರಿ ಶಾಲೆಗಳ ಶಿಕ್ಷಕರು ಆಗಮಿಸಬೇಕು ಎಂದು ಸುತ್ತೋಲೆ ಹೊರಡಿಸಲಾಗಿತ್ತು.



### ನಂಬಲಾಗುತ್ತಿಲ್ಲ ಎಂದ ದೆಹಲಿ ನಿರ್ಮಾತೃಗಳು

ಪ್ರಮಾಣ ಕಾರ್ಯಕ್ರಮದಲ್ಲಿ ವಿಶೇಷ ಆಹ್ವಾನಿತರಾಗಿ ಭಾಗವಹಿಸಿದ ದೆಹಲಿಯ ಅಭಿವೃದ್ಧಿಗೆ ತಮ್ಮದೇ ಆದ ಕೊಡುಗೆ ನೀಡಿದ ವಿವಿಧ ಕ್ಷೇತ್ರಗಳ 50 ಮಂದಿ 'ದೆಹಲಿಯ ನಿರ್ಮಾತೃ'ಗಳಿಗೆ ವೇದಿಕೆಯಲ್ಲೇ ಆಸನ ವ್ಯವಸ್ಥೆ ಮಾಡಲಾಗಿತ್ತು. ಜತೆಗೆ ಇವರನ್ನು ಸನ್ಮಾನಿಸಲಾಯಿತು. ಇವರ ಸಂತೋಷಕ್ಕೆ ಪಾರವೇ ಇರಲಿಲ್ಲ. 'ಇಂಥದ್ದೊಂದು ಅವಕಾಶ ಸಿಕ್ಕಿರುವುದು ನಮಗೆ ಹೆಮ್ಮೆ ತಂದಿದೆ, ನಾವಿದನ್ನು ಕನಸು ಮನಸ್ಸಿನಲ್ಲೂ ನೆನೆಸಿರಲಿಲ್ಲ. ನಮ್ಮಂತಹ ಸಾಮಾನ್ಯರನ್ನು ಇಲ್ಲಿಗೆ ಕರೆಸಿ ಸನ್ಮಾನ ಮಾಡಿರುವುದು ನಂಬಲಾಗುತ್ತಿಲ್ಲ' ಎಂದು ಅವರು ಹೇಳಿಕೊಂಡಿದ್ದಾರೆ. ಈ 50 ಮಂದಿಯ ಪೈಕಿ, ಬಸ್ ನಿರ್ವಾಹಕರು, ನೈರ್ಮಲ್ಯ ಕಾರ್ಮಿಕರು, ಬಸ್ ಮಾರ್ಷಲ್, ನಿರ್ಮಾಣ ಕಾರ್ಮಿಕರು ಇದ್ದರು.

### ಹಲವು ಬೇಬಿ ಮಫ್ಲರ್‌ಮ್ಯಾನ್‌ಗಳು



ದೆಹಲಿ ಫಲಿತಾಂಶದ ದಿನ ಆಪ್ ಕಾರ್ಯಕರ್ತ ರಾಹುಲ್ ತೋಮರ್ ಪುತ್ರ ಅವ್ಯಾನ್ ತೋಮರ್‌ಗೆ ಕೇಜ್ರಿವಾಲ್‌ರಂತೆ ಪೋಷಾಕು ಧರಿಸಿದ್ದ ಫೋಟೋ ವೈರಲ್ ಆಗಿತ್ತು. ಭಾನುವಾರ ಕಾರ್ಯಕ್ರಮಕ್ಕೆ ಆ ಪೋರನಿಗೆ ವಿಶೇಷ ಆಹ್ವಾನ ನೀಡಲಾಗಿತ್ತು. ಅವ್ಯಾನ್ ತೋಮರ್ ಪ್ರಮಾಣ ವಚನ ಕಾರ್ಯಕ್ರಮ ನಡೆವ ವೇದಿಕೆಯ ಮುಂಭಾಗದಲ್ಲಿಯೇ ಅತ್ತಿಂದಿತ್ತ ಓಡಾಡುತ್ತಿದ್ದ ಮತ್ತು ಆಕರ್ಷಣೆಯ ಕೇಂದ್ರವಾಗಿದ್ದ. ಆಪ್ ನಾಯಕ ರಾಘವ್ ಛಡ್ಡಾ ಅವರು ಈ ಪುಟಾಣಿಯ ಹತ್ತಿರ ಬಂದು ಜತೆಗೆ ಸೆಲ್ಫಿ ತೆಗೆದುಕೊಂಡರು. ಕುತೂಹಲಕಾರಿ ವಿಚಾರವೆಂದರೆ, ಅವ್ಯಾನ್ ಜತೆ ಇನ್ನೂ ಹಲವಾರು ಮಂದಿ ಚಿಣ್ಣರಿಗೆ ಕೇಜ್ರಿವಾಲ್‌ರಂತೆ ಕನ್ನಡಕ, ಮೀಸೆ, ಆಪ್‌ನ ಟೋಪಿ, ಮಫ್ಲರ್ ಸುತ್ತಿಕೊಂಡು ಕರೆತರಲಾಗಿತ್ತು.

18